

ಅಪೂಟ ಉಡುಗ್ತದ' ಸಂಬಂಧಿಕರು ಮೂಗು ಮುರಿಯುತ್ತಿದ್ದರು. ಮಾತಿನ ಚಟದಿಂದ ತನ್ನ ಬಾಳಿಗೆ ತಾನೇ ಕೈಯ್ಯಾರೆ ಬೆಂಕಿ ಹಚ್ಚಿಕೊಳ್ಳುತ್ತಾಳೆ, ಬೂದಿ ಬಳಿದುಕೊಳ್ಳುತ್ತಾಳೆ ಎಂದು ಊರಮಂದಿಯೆಲ್ಲ ಈಕೆಯ ಭವಿಷ್ಯವನ್ನು ಒಟಗುಟ್ಟಿ ಸಿಟ್ಟು ತೀರಿಸಿಕೊಳ್ಳುತ್ತಿದ್ದರು. ಅವರೆಲ್ಲರ ಹಾರೈಕೆಯಂತೆ ಒಂದು ದಿನ ಮೂಗದಾಣ ಬಿದ್ದೇಬಿಟ್ಟಿತು. ಗಂಡನ ಊರು ಯಮಕನಮರಡಿಗೆ ಹೋದಮೇಲೆ ಈಕೆಯ ವಾಗ್ಝರಿ ಮತ್ತಷ್ಟು ಶಕ್ತಿಯುತವಾಗಿ ಭೋರ್ಗರೆಯತೊಡಗಿತು. ಅವಳ ಮಾತುಗಳಲ್ಲಿರುತ್ತಿದ್ದ ಸ್ಪಷ್ಟತೆ, ತಾರ್ಕಿಕತೆ, ಸಂಭಾವ್ಯತೆ, ಸತ್ಯವನ್ನು ಪ್ರಶ್ನಿಸುವ ರೀತಿ, ಬೇಡವಾದ್ದನ್ನು ನಿರಾಕರಿಸುವ ಛಾತಿ ಕಹಿ ಎನ್ನಿಸುತ್ತಿತ್ತು. ಹಾಲಗಾಬಾಯಿ ಎಂದು ಕರೆಯುತ್ತಿದ್ದ ಗಂಡನ ಸಂಬಂಧಿಕರು ಬರುಬರುತ್ತ ಹಾಗಲಬಾಯಿ ಎಂದು ಗುಪ್ತನಾಮಕರಣ ಮಾಡಿಬಿಟ್ಟರು. ಅದು ಬಾಯಿಂದ ಬಾಯಿಗೆ ದಾಟಿ ಅಗಲಬಾಯಿಯಾಯಿತು.

ಅದೊಂದು ದಿನ ಯಮಕನಮರಡಿಯ ಕೆರೆದಿಬ್ಬದ ಮೇಲೆ ಸ್ವಸಹಾಯ ಸಂಘಗಳ ಕುರಿತು ಡಾಕ್ಯುಮೆಂಟರಿಯ ಶೂಟಿಂಗ್ ನಡೆಯುತ್ತಿತ್ತು. ಊರಿನ ಮಂದಿಯೆಲ್ಲ ಸುತ್ತುವರೆದು ನೋಡುತ್ತಿದ್ದರು. ಫಲಾನುಭವಿಗಳ ಬೈಟ್‌ಗಾಗಿ ಡೈರೆಕ್ಟರ್ ಮಾಂತೇಶ ತಾಸುಗಟ್ಟಲೆ ಗುದ್ದಾಡುತ್ತಿದ್ದ. ಮೈಕ್ ಮುಂದೆ ಬರುತ್ತಿದ್ದಂತೆ ಗಾಬರಿಗೆ ಬಿದ್ದು ಮಾತು ನಿಲ್ಲಿಸುತ್ತಿದ್ದರು. ಇನ್ನೂ ಕೆಲವರಂತೂ ನಾಚಿ ನೀರಾಗಿ ಆವಿಯಾಗುತ್ತಿದ್ದರು. ತಲೆಕೆಟ್ಟ ಮಾಂತೇಶ, 'ಈ ಊರಾಗಿನ ಹೆಣಮಕ್ಕಳೆಲ್ಲಾ ಮಾತ ಸತ್ತವರ ಅದಾರೇನ್ಲೇಪಾ?' ತನ್ನ ಅಸಿಸ್ಟೆಂಟ್‌ಗೆ ಹೇಳಿದ್ದು ಮೈಕಿನಲ್ಲಿ ಕೇಳಿಸಿತ್ತು. ಶುಭಾಂಗಿ ಅವನೆದುರು ಥಟ್ಟನೆ ಪ್ರತ್ಯಕ್ಷಳಾಗಿದ್ದಳು. ಆಕೆಯ ಜ್ಞಾನಭಾಂಡಾರ, ಪ್ರಸ್ತುತಿಯ ಶೈಲಿಯಿಂದಾಗಿ ಮಾಂತೇಶನ ಸ್ಕ್ರಿಪ್ಟ್ ಕೆರೆಗೆ ಹಾರವಾಗಿ, ಡಾಕ್ಯುಮೆಂಟರಿ ಅವಳ ಮಾತಿಗನುಗುಣವಾಗಿ ಸಾಗಿತು. ಮುಂದೆ ಅದಕ್ಕೆ ಸಾಕಷ್ಟು ಬಹುಮಾನಗಳು ಬಂದವು. ಶುಭಾಂಗಿಯನ್ನು ಬೆಂಗಳೂರು ಕರೆಯಿತು.

ಕಲಾತ್ಮಕ ಸಿನೆಮಾ ಒಂದರಲ್ಲಿ ಅವಕಾಶ